20.11.24 Morning Kannada Murli Om Shanti BapDada Madhuban

"ಮಧುರ ಮಕ್ಕಳೇ 'ಮನ್ಮನಾಭವ' ವಶೀಕರಣ ಮಂತ್ರದಿಂದಲೇ ನೀವು ಮಾಯೆಯ ಮೇಲೆ ಜಯಗಳಿಸಲು ಸಾಧ್ಯವಿದೆ. ಈ ಮಹಾಮಂತ್ರವನ್ನು ಎಲ್ಲರಿಗೂ ನೆನಪು ತರಿಸಿ"

ಪ್ರಶ್ನೆ: ಈ ಬೇಹದ್ದಿನ ನಾಟಕದಲ್ಲಿ ಎಲ್ಲದಕ್ಕಿಂತ ಬಲಶಾಲಿಯಾದಂತಹ ನೌಕರರು ಯಾರ್ಯಾರು ಆಗಿದ್ದಾರೆ ಮತ್ತು ಹೇಗೆ?

ಉತ್ತರ: ಈ ಹಳೆಯ ಪ್ರಪಂಚವನ್ನು ಸ್ವಚ್ಛಗೊಳಿಸಲು ಎಲ್ಲದಕ್ಕಿಂತ ಬಲಶಾಲಿಯಾದ ನೌಕರರೆಂದರೆ ಪ್ರಾಕೃತಿಕ ವಿಕೋಪಗಳಾಗಿವೆ. ಭೂಮಿ ಅಲುಗಾಡುತ್ತದೆ, ಪ್ರವಾಹ ಬರುತ್ತದೆ ನಂತರ ಸ್ವಚ್ಛವಾಗಿಬಿಡುತ್ತದೆ. ಇದಕ್ಕಾಗಿ ಭಗವಂತನು ಯಾರಿಗೂ ಸಹ ಸಲಹೆಯನ್ನು ಅಥವಾ ಸೂಚನೆಯನ್ನೇನು ಕೊಡುವುದಿಲ್ಲ. ತಂದೆಯು ಮಕ್ಕಳನ್ನು ಹೇಗೆ ನಾಶ ಮಾಡುತ್ತಾರೆ! ಇದು ಡ್ರಾಮಾದ ಪಾತ್ರವಾಗಿದೆ. ರಾವಣರಾಜ್ಯವಲ್ಲವೆ, ಇದಕ್ಕೆ ಈಶ್ವರನ ಪ್ರೇರಣೆಯೆಂದು ಹೇಳುವುದಿಲ್ಲ.

ಓಂಶಾಂತಿ. ತಂದೆಯೇ ಮಕ್ಕಳಿಗೆ ತಿಳಿಸಿಕೊಡುತ್ತಾರೆ - ಮಕ್ಕಳೇ, ಮನ್ಮನಾಭವ. ಮಕ್ಕಳು ತಂದೆಗೆ ಕುಳಿತು ತಿಳಿಸುತ್ತಾರೆಂದಲ್ಲ. ಮಕ್ಕಳು ಶಿವತಂದೆ, ಮನ್ಮನಾಭವ ಎಂದು ಹೇಳುವುದಿಲ್ಲ. ಮಕ್ಕಳು ಪರಸ್ಪರ ಕುಳಿತು ವಾರ್ತಾಲಾಪ ಮಾಡುತ್ತೀರಿ, ಸಲಹೆಯನ್ನು ನೀಡುತ್ತೀರಿ ಆದರೂ ಮೂಲ ಮಹಾಮಂತ್ರವೇನಿದೆ ಅದನ್ನು ತಂದೆಯೇ ನೀಡುತ್ತಾರೆ. ಗುರುಜನರು ಮಂತ್ರವನ್ನು ನೀಡುತ್ತಾರೆ. ಈ ಪದ್ಧತಿಯು ಎಲ್ಲಿಂದ ಬಂದಿತು? ತಂದೆಯು ಯಾವ ಹೊಸಸೃಷ್ಟಿಯನ್ನು ರಚಿಸುವಂತಹವರಾಗಿದ್ದಾರೆ, ಅವರೇ ಮೊಟ್ಟಮೊದಲು ಮನ್ಮನಾಭವದ ಮಹಾಮಂತ್ರವನ್ನು ಕೊಡುತ್ತಾರೆ. ಇದರ ಹೆಸರೇ ವಶೀಕರಣ ಮಂತ್ರ ಅರ್ಥಾತ್ ಮಾಯೆಯ ಮೇಲೆ ಜಯಗಳಿಸುವಂತಹ ಮಂತ್ರವಾಗಿದೆ. ಇದನ್ನು ಆಂತರ್ಯದಲ್ಲಿ ಜಪಿಸುವುದಲ್ಲ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ತಂದೆಯು ಅರ್ಥಸಹಿತವಾಗಿ ತಿಳಿಸಿಕೊಡುತ್ತಾರೆ. ಭಲೆ ಗೀತೆಯಲ್ಲಿದೆ ಆದರೆ ಅರ್ಥಸಹಿತವಾಗಿ ಯಾರೂ ತಿಳಿದುಕೊಂಡಿಲ್ಲ. ಗೀತೆಯನ್ನು ನುಡಿಸುವಂತಹ ಸಂದರ್ಭ ಇದಾಗಿದೆ. ಹೆಸರನ್ನು ಬದಲಾವಣೆ ಮಾಡಲಾಗಿದೆ. ಎಷ್ಟು ದೊಡ್ಡ-ದೊಡ್ಡ ಪುಸ್ತಕ ಮುಂತಾದವು ಭಕ್ತಿಮಾರ್ಗದಲ್ಲಾಗಿವೆ. ವಾಸ್ತವದಲ್ಲಿ ಇದನ್ನು ಮಕ್ಕಳಿಗೆ ಬಾಯಿಂದಲೇ ತಿಳಿಸುತ್ತಾರೆ. ತಂದೆಯಲ್ಲಿ ಜ್ಞಾನವಿದೆ, ಮಕ್ಕಳಲ್ಲಿಯೂ ಆತ್ಮವೇ ಜ್ಞಾನದ ಧಾರಣೆ ಮಾಡುತ್ತದೆ ಬಾಕಿ ಕೇವಲ ಸಹಜ ಮಾಡಿ ತಿಳಿಸಿಕೊಡುವುದಕ್ಕಾಗಿ ಈ ಚಿತ್ರ ಮೊದಲಾದುವುಗಳನ್ನು ಮಾಡಲಾಗುತ್ತದೆ. ನೀವು ಮಕ್ಕಳ ಬುದ್ಧಿಯಲ್ಲಿ ಇದೆಲ್ಲಾ ಜ್ಞಾನವಿದೆ. ನಿಮಗೆ ತಿಳಿದಿದೆ – ಅವಶ್ಯವಾಗಿ ಆದಿಸನಾತನ ದೇವಿ-ದೇವತಾ ಧರ್ಮವಿತ್ತು, ಆಗ ಮತ್ತ್ಯಾವುದೇ ಖಂಡಗಳಿರಲಿಲ್ಲ. ಈ ಎಲ್ಲಾ ಖಂಡಗಳೆಲ್ಲವೂ ನಂತರದಲ್ಲಾಗಿವೆ ಆದ್ದರಿಂದ ಆ ಚಿತ್ರವನ್ನು ಒಂದು ಮೂಲೆಯಲ್ಲಿಡಬೇಕು. ಅಲ್ಲಿ ನೀವು ತೋರಿಸುತ್ತೀರಿ, ಭಾರತದಲ್ಲಿ ಇವರ ರಾಜ್ಯವಿತ್ತು, ಆಗ ಮತ್ತ್ಯಾವುದೇ ಧರ್ಮದವರಿರಲಿಲ್ಲ ಈಗಂತೂ ಎಷ್ಟೊಂದು ಧರ್ಮಗಳಿವೆ. ಮತ್ತೆ ಅಂತಿಮದಲ್ಲಿಯೂ ಇವೆಲ್ಲವೂ ಇರುವುದಿಲ್ಲ. ಇದು ತಂದೆಯ ಯುಕ್ತಿಯಾಗಿದೆ. ಪಾಪ! ಮನುಷ್ಯರಿಗಂತೂ ಎಷ್ಟೊಂದು ಚಿಂತೆಯಾಗಿದೆ. ನೀವು ಮಕ್ಕಳು ತಿಳಿದುಕೊಳ್ಳುತ್ತೀರಿ - ಇದಂತೂ ಸಂಪೂರ್ಣ ಸರಿಯಾಗಿದೆ. ತಂದೆಯು ಬಂದು ಬ್ರಹ್ಮಾರವರ ಮೂಲಕ ಸ್ಥಾಪನೆ ಮಾಡುತ್ತಾರೆಂದು ಬರೆಯಲ್ಪಟ್ಟಿದೆ, ಯಾವುದರ ಸ್ಥಾಪನೆ? ಹೊಸ ಪ್ರಪಂಚದ ಸ್ಥಾಪನೆ. ಜಮುನಾ ನದಿಯ ತೀರವು ರಾಜಧಾನಿಯಾಗಿದೆ. ಅಲ್ಲಿ ಒಂದೇ ಧರ್ಮವಿರುತ್ತದೆ, ಮಾನವ ವಂಶವೃಕ್ಷವು ಬಹಳ ಚಿಕ್ಕದಾಗಿರುತ್ತದೆ. ಈ ವೃಕ್ಷದ ಜ್ಞಾನವನ್ನೂ ಸಹ ತಂದೆಯೇ ಕೊಡುತ್ತಾರೆ, ಚಕ್ರದ ಜ್ಞಾನವನ್ನೂ ಸಹ ಕೊಡುತ್ತಾರೆ. ಸತ್ಯಯುಗದಲ್ಲಿ ಒಂದೇ ಭಾಷೆಯಿರುತ್ತದೆ ಮತ್ತ್ಯಾವುದೇ ಭಾಷೆಯಿರುವುದಿಲ್ಲ. ನೀವು ಸಿದ್ಧ ಮಾಡಬಹುದು - ಒಂದೇ ಭಾರತವಿತ್ತು, ಒಂದೇ ರಾಜ್ಯವಿತ್ತು, ಒಂದೇ ಭಾಷೆಯಿತ್ತು. ಸ್ವರ್ಗದಲ್ಲಿ ಸುಖ-

ಶಾಂತಿಯಿತ್ತು, ದುಃಖದ ಹೆಸರು-ಗುರುತು ಇರಲಿಲ್ಲ. ಆರೋಗ್ಯ-ಐಶ್ವರ್ಯ- ಸಂತೋಷ ಎಲ್ಲವೂ ಇತ್ತು. ಭಾರತವು ಹೊಸದಾಗಿದ್ದಾಗ ಆಯಸ್ಸೂ ಸಹ ಬಹಳ ಧೀರ್ಘವಾಗಿತ್ತು ಏಕೆಂದರೆ ಪವಿತ್ರತೆಯಿತ್ತು. ಪವಿತ್ರತೆಯಲ್ಲಿ ಮನುಷ್ಯರು ಆರೋಗ್ಯವಂತರಾಗಿರುತ್ತಾರೆ. ಅಪವಿತ್ರತೆಯಲ್ಲಿ ನೋಡಿ, ಮನುಷ್ಯರ ಗತಿಯೇನಾಗಿಬಿಡುತ್ತದೆ. ಕುಳಿತು-ಕುಳಿತಿದ್ದಂತೆಯೇ ಅಕಾಲ ಮೃತ್ಯುವಾಗಿಬಿಡುತ್ತದೆ, ಯುವಕರೂ ಸಹ ಸಾಯುತ್ತಾರೆ. ಎಷ್ಟೊಂದು ದುಃಖವಾಗುತ್ತದೆ! ಸತ್ಯಯುಗದಲ್ಲಿ ಅಕಾಲ ಮೃತ್ಯುವಾಗುವುದಿಲ್ಲ, ಪೂರ್ಣಾಯಸ್ಸಿರುತ್ತದೆ. ಪೀಳಿಗೆಯವರೆಗೆ ಅರ್ಥಾತ್ ವೃದ್ಧಾಪ್ಯದವರೆಗೆ ಯಾರೂ ಸಾಯುವುದಿಲ್ಲ.

ಯಾರಿಗೆ ತಿಳಿಸುತ್ತೀರೋ ಇದನ್ನು ಬುದ್ಧಿಯಲ್ಲಿ ಕುಳ್ಳರಿಸಬೇಕು- ಬೇಹದ್ದಿನ ತಂದೆಯನ್ನು ನೆನಪು ಮಾಡಿ, ಅವರೇ ಪತಿತ-ಪಾವನನಾಗಿದ್ದಾರೆ, ಸದ್ಗತಿದಾತನಾಗಿದ್ದಾರೆ. ನಿಮ್ಮ ಬಳಿ ಆ ನಕ್ಷೆಯೂ ಇರಬೇಕು ಆಗ ಸಿದ್ಧಮಾಡಿ ತಿಳಿಸಬಲ್ಲಿರಿ. ಇಂದಿನ ನಕ್ಷೆಯು ಇದಾಗಿದೆ, ನೆನ್ನೆಯ ನಕ್ಷೆಯು ಹೀಗಿತ್ತು ಎಂದು ಹೇಳಬೇಕು. ಕೆಲವರಂತೂ ಸರಿಯಾಗಿ ಕೇಳುವುದೂ ಇಲ್ಲ ಅಂದಾಗ ಇದನ್ನು ಪೂರ್ಣ ತಿಳಿಸಬೇಕಾಗುತ್ತದೆ. ಈ ಭಾರತವು ಅವಿನಾಶಿ ಖಂಡವಾಗಿದೆ. ಈ ದೇವಿ-ದೇವತಾ ಧರ್ಮವಿದ್ದಾಗ ಮತ್ತಾವ ಖಂಡವೂ ಇರಲಿಲ್ಲ. ಈಗ ಆದಿಸನಾತನ ದೇವಿ- ದೇವತಾ ಧರ್ಮವಿಲ್ಲ. ಈ ಲಕ್ಷ್ಮಿ-ನಾರಾಯಣರು ಎಲ್ಲಿಗೆ ಹೋದರೆಂಬುದು ಯಾರೂ ತಿಳಿಸಲು ಸಾಧ್ಯವಿಲ್ಲ, ತಿಳಿಸುವ ಶಕ್ತಿಯೂ ಯಾರಲ್ಲಿಯೂ ಇಲ್ಲ. ನೀವು ಮಕ್ಕಳು ಇದನ್ನು ಬಹಳ ಚೆನ್ನಾಗಿ ರಹಸ್ಯಯುಕ್ತವಾಗಿ ತಿಳಿಸಬಲ್ಲಿರಿ. ಇದರಲ್ಲಿ ತಬ್ಬಿಬ್ಬಾಗುವ ಅವಶ್ಯಕತೆಯಿಲ್ಲ. ನೀವು ಎಲ್ಲವನ್ನೂ ಅರಿತಿದ್ದೀರಿ ಮತ್ತು ಅನ್ಯರಿಗೂ ಸಹ ಹೇಳಬಲ್ಲಿರಿ. ಇವರು ಎಲ್ಲಿ ಹೋದರೆಂದು ನೀವು ಯಾರನ್ನಾದರೂ ಪ್ರಶ್ನಿಸಿದರೆ ನಿಮ್ಮ ಪ್ರಶ್ನೆಯನ್ನು ಕೇಳಿ ಚಕಿತರಾಗಿಬಿಡುತ್ತಾರೆ. ಹೇಗೆ ಇವರೂ 84 ಜನ್ಮಗಳನ್ನು ತಿಳಿದುಕೊಳ್ಳುತ್ತಾರೆ ಎಂಬುದನ್ನು ನೀವಂತೂ ನಿಶ್ಚಯದಿಂದ ತಿಳಿಸುತ್ತೀರಿ. ನೀವು ತಕ್ಷಣ ಹೇಳುತ್ತೀರಿ - ಸತ್ಯಯುಗ ಹೊಸಪ್ರಪಂಚದಲ್ಲಿ ನಮ್ಮ ರಾಜ್ಯವಿತ್ತು, ಒಂದೇ ಆದಿಸನಾತನ ದೇವಿ- ದೇವತಾ ಧರ್ಮವಿತ್ತು, ಅಲ್ಲಿ ಯಾವುದೇ ಧರ್ಮವಿರಲಿಲ್ಲ, ಎಲ್ಲವೂ ಹೊಸದಾಗಿತ್ತು. ಪ್ರತಿಯೊಂದು ವಸ್ತುವು ಸತೋಪ್ರಧಾನವಾಗಿರುತ್ತದೆ. ಚಿನ್ನವೂ ಸಹ ಎಷ್ಟೊಂದು ಹೇರಳವಾಗಿರುತ್ತದೆ. ಎಷ್ಟು ಸಹಜವಾಗಿ ಸಿಗುತ್ತದೆ, ಅದರ ಇಟ್ಟಿಗೆಗಳಿಂದ ಮನೆಗಳು ನಿರ್ಮಾಣವಾಗುತ್ತದೆ. ಅಲ್ಲಂತೂ ಎಲ್ಲವೂ ಚಿನ್ನದಿಂದ ಮಾಡಲ್ಪಟ್ಟಿರುತ್ತದೆ. ಗಣಿಗಳೆಲ್ಲವೂ ಹೊಸದಾಗಿರುತ್ತದೆಯಲ್ಲವೆ, ಸತ್ಯಯುಗದಲ್ಲಿ ಬಹಳಷ್ಟು ಅಪ್ಪಟ ಚಿನ್ನವಿರುವ ಕಾರಣ ನಕಲಿಚಿನ್ನವನ್ನು ಅಲ್ಲಿ ತಯಾರು ಮಾಡುವುದಿಲ್ಲ. ಇಲ್ಲಂತೂ ಅಪ್ಪಟ ಚಿನ್ನದ ಹೆಸರೇ ಇಲ್ಲ ಎಲ್ಲವೂ ನಕಲಿಯ ಪ್ರಭಾವವಿದೆ ಆದ್ದರಿಂದಲೇ ಸುಳ್ಳು ಮಾಯೆ, ಸುಳ್ಳು ಶರೀರವೆಂದು ಹೇಳಲಾಗುತ್ತದೆ. ಸಂಪತ್ತು ಸಹ ಸುಳ್ಳಾಗಿದೆ. ವಜ್ರರತ್ನಗಳು ಇಂತಿಂತಹ ಪ್ರಕಾರದವು ಬರುತ್ತವೆ, ಅಪ್ಪಟ ಯಾವುದು ಮತ್ತು ನಕಲಿ ಯಾವುದೆಂದು ಅರ್ಥವಾಗುವುದೇ ಇಲ್ಲ. ಇಷ್ಟೊಂದು ಶೋ ಇರುತ್ತದೆ, ಅದರಲ್ಲಿ ಯಾವುದು ಸತ್ಯ, ಯಾವುದು ನಕಲಿ ಎಂದು ಗುರುತಿಸುವುದಕ್ಕೇ ಸಾಧ್ಯವಾಗುವುದಿಲ್ಲ. ಸತ್ಯಯುಗದಲ್ಲಿ ಈ ನಕಲಿ ವಸ್ತುಗಳಿರುವುದಿಲ್ಲ.

ವಿನಾಶವಾದಾಗ ಎಲ್ಲವೂ ಭೂಮಿಯಲ್ಲಿ ಹೊರಟುಹೋಗುತ್ತವೆ. ಇಷ್ಟೊಂದು ದೊಡ್ಡ-ದೊಡ್ಡ ಕಲ್ಲು, ವಜ್ರ ಇತ್ಯಾದಿಗಳು ಮನೆಗಳಿಗೆ ಹಾಕಿರುತ್ತಾರೆ, ಅದೆಲ್ಲವೂ ಎಲ್ಲಿಂದ ಬಂದಿರಬಹುದು, ಯಾರು ಅದೆಲ್ಲವನ್ನೂ ಕತ್ತರಿಸಿರಬಹುದು? ಭಾರತದಲ್ಲಿಯೂ ಸಹ ಅನುಭವಿಗಳು ಅನೇಕರಿದ್ದಾರೆ, ಬುದ್ಧಿವಂತರಾಗುತ್ತಾ ಹೋಗುತ್ತಾರೆ. ಆ ಬುದ್ಧಿವಂತಿಕೆಯನ್ನು ಇಲ್ಲಿಂದಲೇ ತೆಗೆದುಕೊಂಡು ಹೋಗುತ್ತಾರಲ್ಲವೆ. ಕಿರೀಟ ಇತ್ಯಾದಿಗಳನ್ನು ಕೇವಲ ವಜ್ರಗಳಿಂದ ಮಾಡಿರುವುದಿಲ್ಲ. ಬಹಳಷ್ಟು ಪರಿಶುದ್ಧ ಸತ್ಯವಜ್ರಗಳಿಂದ ಮಾಡಲ್ಪಟ್ಟಿರುತ್ತವೆ. ಈ ವಿದ್ಯುತ್. ಟೆಲಿಫೋನ್, ವಾಹನಗಳು ಮೊದಲಾದುವುಗಳೇನೂ ಮೊದಲಿರಲಿಲ್ಲ. ಬ್ರಹ್ಮಾಬಾಬಾರವರ ಇದೊಂದೇ ಜೀವನದಲ್ಲಿ ಏನೇನು ಬೆಳಕಿಗೆ ಬಂದಿದೆ! 100 ವರ್ಷಗಳಲ್ಲಿಯೇ ಇದೆಲ್ಲವೂ ಹೊರಬಂದಿದೆ. ಸತ್ಯಯುಗದಲ್ಲಂತೂ ಬಹಳಷ್ಟು ಅನುಭವಿಗಳಿರುತ್ತಾರೆ. ಕಲಿಯುತ್ತಿರುತ್ತಾರೆ, ಬುದ್ಧಿವಂತರಾಗುತ್ತಿರುತ್ತಾರೆ. ಇದನ್ನೂ ಸಹ ಮಕ್ಕಳಿಗೆ ಸಾಕ್ಷಾತ್ಕಾರ ಮಾಡಿಸಲಾಗುತ್ತದೆ. ಅಲ್ಲಿ ಪುಷ್ಪಕವಿಮಾನ (ಎಲಿಕ್ಯಾಪ್ಟರ್)ಗಳೂ ಸಹ ಪೂರ್ಣ ರಕ್ಷಣೆಯಿಂದ ಕೂಡಿರುತ್ತದೆ. ಮಕ್ಕಳೂ ಸಹ ಬಹಳ ಸತೋಪ್ರಧಾನ, ಸೂಕ್ಷ್ಮ ಬುದ್ಧಿಯವರಾಗಿರುತ್ತಾರೆ. ಸ್ವಲ್ಪಮುಂದೆ ಹೋಗಿ ಆಗ ಎಲ್ಲವೂ ನಿಮಗೆ ಸಾಕ್ಷಾತ್ಕಾರಗಳಾಗುತ್ತಾ ಇರುತ್ತದೆ. ಹೇಗೆ ತಮ್ಮ ದೇಶದ

ಸಮೀಪಕ್ಕೆ ಬರುತ್ತಿರುವಾಗ ಗಿಡ, ಮರಗಳೆಲ್ಲವೂ ಕಾಣುತ್ತದೆಯಲ್ಲವೆ. ಈಗ ಮನೆಯು ಬಂದಿತೆಂದರೆ ಬಂದಿತು, ಹತ್ತಿರ ಬಂದು ತಲುಪಿದ್ದೇವೆಂದು ಒಳಗೆ ಖುಷಿಯಾಗುತ್ತಿರುತ್ತದೆ. ಹಾಗೆಯೇ ಅಂತಿಮದಲ್ಲಿ ನಿಮಗೂ ಇಂತಹ ಸಾಕ್ಷಾತ್ಕಾರಗಳಾಗುತ್ತಾ ಇರುತ್ತವೆ. ಮಕ್ಕಳು ತಿಳಿದುಕೊಂಡಿದ್ದೀರಿ - ತಂದೆಯು ಪ್ರಿಯಾತಿಪ್ರಿಯನಾಗಿದ್ದಾರೆ, ಪರಮ ಆತ್ಮನಾಗಿದ್ದಾರೆ. ಅವರನ್ನು ಎಲ್ಲರೂ ನೆನಪು ಮಾಡುತ್ತಾರೆ. ಭಕ್ತಿಮಾರ್ಗದಲ್ಲಿ ಪರಮಾತ್ಮನನ್ನು ನೀವೂ ಸಹ ನೆನಪು ಮಾಡುತ್ತಿದ್ದೀರಲ್ಲವೆ ಆದರೆ ಅವರು ದೊಡ್ಡರೂಪದಲ್ಲಿದ್ದಾರೆಯೋ ಅಥವಾ ಚಿಕ್ಕರೂಪದಲ್ಲಿದ್ದಾರೆಯೋ ಗೊತ್ತಿಲ್ಲ. ಭೃಕುಟಿಯ ಮಧ್ಯದಲ್ಲಿ ಹೊಳೆಯುತ್ತಿರುವ ನಕ್ಷತ್ರವೆಂದು ಹೇಳುತ್ತಾರೆಂದರೆ ಅವಶ್ಯವಾಗಿ ಬಿಂದುರೂಪದಲ್ಲಿಯೇ ಇದ್ದಾರಲ್ಲವೆ. ಅವರಿಗೆ ಪರಮ ಆತ್ಮ ಅರ್ಥಾತ್ ಪರಮಾತ್ಮನೆಂದು ಹೇಳಲಾಗುತ್ತದೆ. ಅವರಲ್ಲಿ ಎಲ್ಲಾ ವಿಶೇಷತೆಗಳಿವೆ. ಜ್ಞಾನಸಾಗರನಾಗಿದ್ದಾರೆ, ಯಾವ ಜ್ಞಾನವನ್ನು ತಿಳಿಸುತ್ತಾರೆ! ಅವರು ಬಂದು ತಿಳಿಸಿದಾಗಲೇ ತಿಳಿಯುತ್ತದೆಯಲ್ಲವೆ. ನೀವೂ ಸಹ ಮೊದಲು ತಿಳಿದುಕೊಂಡಿರಲಿಲ್ಲ. ಕೇವಲ ಭಕ್ತಿಯನ್ನೇ ತಿಳಿದುಕೊಂಡಿದ್ದಿರಿ. ಈಗಂತೂ ನೀವು ತಿಳಿದುಕೊಳ್ಳುತ್ತೀರಿ - ಆಶ್ಚರ್ಯವಾಗಿದೆ, ಆತ್ಮವನ್ನು ಈ ಕಣ್ಣುಗಳಿಂದ ನೋಡಲು ಸಾಧ್ಯವಿಲ್ಲ ಆದ್ದರಿಂದ ತಂದೆಯನ್ನೂ ಸಹ ಮರೆತುಹೋಗುತ್ತಾರೆ. ನಾಟಕದಲ್ಲಿ ಪಾತ್ರವೇ ಹೀಗಿದೆ ಯಾರನ್ನು ವಿಶ್ವದ ಮಾಲೀಕರನ್ನಾಗಿ ಮಾಡುತ್ತಾರೆಯೋ ಅವರ ಹೆಸರನ್ನು ಹಾಕುತ್ತಾರೆ ಮತ್ತು ಆ ರೀತಿ ಮಾಡುವವರ ಹೆಸರನ್ನು ಮರೆಮಾಡಿಬಿಡುತ್ತಾರೆ. ಕೃಷ್ಣನಿಗೆ ತ್ರಿಲೋಕಿನಾಥ, ವೈಕುಂಠನಾಥನೆಂದು

ಹೇಳುತ್ತಾರೆ. ಅರ್ಥವನ್ನೇನೂ ತಿಳಿದುಕೊಂಡಿಲ್ಲ ಕೇವಲ ತಮ್ಮ ದೊಡ್ಡಸ್ತಿಕೆಯನ್ನು ತೋರಿಸುತ್ತಾರೆ. ಭಕ್ತಿಮಾರ್ಗದಲ್ಲಿ ಕುಳಿತು ಅನೇಕ ಮಾತುಗಳನ್ನು ರಚಿಸಿದ್ದಾರೆ ಮತ್ತು ಹೇಳುತ್ತಾರೆ - ಭಗವಂತನಲ್ಲಿ ಇಷ್ಟೊಂದು ಶಕ್ತಿಯಿದೆ, ಅವರು ಕೋಟಿಸೂರ್ಯ ತೇಜೋಮಯನಾಗಿದ್ದಾರೆ. ಎಲ್ಲರನ್ನೂ ಅವರು ಭಸ್ಮ ಮಾಡಬಲ್ಲರು ಎಂದು ಹೇಳಿ ಇಂತಿಂತಹ ಮಾತುಗಳನ್ನು ರಚಿಸಿಬಿಟ್ಟಿದ್ದಾರೆ. ತಂದೆಯು ತಿಳಿಸುತ್ತಾರೆ - ನಾನು ಮಕ್ಕಳ ಭಸ್ಮ ಮಾಡುವುದಾದರೂ ಹೇಗೆ! ಇದಂತೂ ಸಾಧ್ಯವೇ ಇಲ್ಲ. ಮಕ್ಕಳನ್ನು ತಂದೆಯು ವಿನಾಶ ಮಾಡುವರೇ? ಇಲ್ಲ. ಇದಂತೂ ನಾಟಕದಲ್ಲಿ ಪಾತ್ರವಿದೆ, ಹಳೆಯ ಪ್ರಪಂಚವು ಸಮಾಪ್ತಿಯಾಗಲಿದೆ. ಹಳೆಯ ಪ್ರಪಂಚದ ವಿನಾಶಕ್ಕಾಗಿ ಈ ಪ್ರಾಕೃತಿಕ ವಿಕೋಪಗಳೆಲ್ಲವೂ ನೌಕರರಾಗಿವೆ. ಎಷ್ಟು ಶಕ್ತಿಶಾಲಿ ನೌಕರರಾಗಿದ್ದಾರೆ, ಅವಕ್ಕೆ ವಿನಾಶ ಮಾಡಿ ಎನ್ನುವುದು ತಂದೆಯ ಆದೇಶವಾಗಿದೆಯೆಂದಲ್ಲ. ತಂದೆಯು ಆದೇಶ ನೀಡುವುದಿಲ್ಲ, ಬಿರುಗಾಳಿಗಳು ಬರುತ್ತವೆ, ಬರಗಾಲವಾಗುತ್ತದೆ. ಈ ರೀತಿ ಮಾಡಿ ಎಂದು ಭಗವಂತನು ಪ್ರಾಕೃತಿಕ ವಿಕೋಪಗಳಿಗೆ ತಿಳಿಸುತ್ತಾರೆಯೇ? ಎಂದಿಗೂ ಇಲ್ಲ. ಇದು ನಾಟಕದಲ್ಲಿ ಪಾತ್ರವಿದೆ. ಬಾಂಬುಗಳನ್ನು ತಯಾರು ಮಾಡಿ ಎಂದು ತಂದೆಯು ಹೇಳುವುದಿಲ್ಲ, ಇದೆಲ್ಲವೂ ರಾವಣನ ಮತವಾಗಿದೆ. ಇದು ಮಾಡಿ-ಮಾಡಲ್ಪಟ್ಟಂತಹ ನಾಟಕವಾಗಿದೆ. ರಾವಣರಾಜ್ಯವಾಗಿರುವುದರಿಂದ ಆಸುರೀ ಬುದ್ಧಿಯವರಾಗಿಬಿಡುತ್ತಾರೆ. ಎಷ್ಟೊಂದು ಮಂದಿ ಸಾವನ್ನಪ್ಪುತ್ತಾರೆ, ಕೊನೆಗೆ ಎಲ್ಲವನ್ನೂ ಸುಟ್ಟುಹಾಕುತ್ತಾರೆ. ಇದು ಮಾಡಿ-ಮಾಡಲ್ಪಟ್ಟ ಆಟವಾಗಿದೆ, ಇದು ಪುನರಾವರ್ತನೆಯಾಗುತ್ತದೆ ಬಾಕಿ ಶಂಕರನು ಕಣ್ಣನ್ನು ತೆರೆಯುವುದರಿಂದ ವಿನಾಶವಾಗಿಬಿಡುತ್ತದೆಯೆಂದಲ್ಲ. ಇದಕ್ಕೆ ಈಶ್ವರೀಯ ವಿಕೋಪಗಳು ಎಂದು ಹೇಳುವುದಿಲ್ಲ. ಇವು ಪ್ರಾಕೃತಿಕ ವಿಕೋಪಗಳಾಗಿವೆ.

ಈಗ ತಂದೆಯು ನೀವು ಮಕ್ಕಳಿಗೆ ಶ್ರೀಮತವನ್ನು ಕೊಡುತ್ತಿದ್ದಾರೆ. ಯಾರಿಗೂ ದುಃಖ ಕೊಡುವ ಮಾತೇ ಇಲ್ಲ. ತಂದೆಯಂತೂ ಸುಖದ ಮಾರ್ಗವನ್ನು ತಿಳಿಸುವವರಾಗಿದ್ದಾರೆ. ನಾಟಕದ ಯುಕ್ತಿಯನುಸಾರ ಮನೆಯೂ ಹಳೆಯದಾಗುತ್ತಲೇ ಹೋಗುತ್ತದೆ. ತಂದೆಯೂ ಸಹ ತಿಳಿಸುತ್ತಾರೆ - ಈಗ ಇಡೀ ಪ್ರಪಂಚವೇ ಹಳೆಯದಾಗಿಬಿಟ್ಟಿದೆ. ಇದು ಸಮಾಪ್ತಿಯಾಗಬೇಕು. ಪರಸ್ಪರ ಹೇಗೆ ಹೊಡೆದಾಡುತ್ತಾರೆಂದು ನೋಡಿ! ಆಸುರೀ ಬುದ್ಧಿಯಲ್ಲವೆ, ಈಶ್ವರೀಯ ಬುದ್ಧಿಯವರಾಗಿದ್ದಾಗ ಯಾವುದೇ ಸಾಯಿಸುವ ಮೊದಲಾದ ಮಾತಿಲ್ಲ. ತಂದೆಯು ತಿಳಿಸುತ್ತಾರೆ - ನಾನು ಎಲ್ಲರ ತಂದೆಯಾಗಿದ್ದೇನೆ. ನನಗೆ ಎಲ್ಲರಪ್ರತಿ ಪ್ರೀತಿಯಿದೆ. ತಂದೆಯು ಇಲ್ಲಿ ನೋಡುತ್ತಾರೆ ಮತ್ತೆ ಗಮನವು ಯಾರಿಗೆ ತಂದೆಯಲ್ಲಿ ಬಹಳ ಪ್ರೀತಿಯಿರುತ್ತದೆಯೋ ಅಂತಹ ಅನನ್ಯ ಮಕ್ಕಳಕಡೆ ದೃಷ್ಟಿಹೋಗುತ್ತದೆ. ಮಕ್ಕಳು ಸೇವೆಯನ್ನು ಮಾಡುತ್ತಾರೆ. ಇಲ್ಲಿ ಕುಳಿತಿದ್ದಂತೆಯೇ ತಂದೆಯ ದೃಷ್ಟಿಯು ಸೇವಾಧಾರಿ ಮಕ್ಕಳಕಡೆ ಹೊರಟುಹೋಗುತ್ತದೆ. ಕೆಲವೊಮ್ಮೆ

ಡೆಹರಾಡೂನ್, ಕೆಲವೊಮ್ಮೆ ಮೀರಟ್. ಕೆಲವೊಮ್ಮೆ ದೆಹಲಿ.... ಯಾವ ಮಕ್ಕಳು ನನ್ನನ್ನು ನೆನಪು ಮಾಡುವರೋ ನಾನೂ ಸಹ ಅವರನ್ನು ನೆನಪು ಮಾಡುತ್ತೇನೆ. ಯಾರು ನನ್ನನ್ನು ನೆನಪೇ ಮಾಡುವುದಿಲ್ಲವೋ ಅಂತಹವರನ್ನೂ ಸಹ ನಾನು ನೆನಪು ಮಾಡುತ್ತೇನೆ ಏಕೆಂದರೆ ನಾನು ಎಲ್ಲರನ್ನೂ ಕರೆದುಕೊಂಡು ಹೋಗಬೇಕಾಗಿದೆಯಲ್ಲವೆ. ಹಾ! ಯಾರು ನನ್ನ ಮೂಲಕ ಸೃಷ್ಟಿಚಕ್ರದ ಜ್ಞಾನವನ್ನು ತಿಳಿದುಕೊಳ್ಳುವರೋ ಅವರು ನಂಬರ್‌ವಾರ್ ಶ್ರೇಷ್ಠಪದವಿಯನ್ನು ಪಡೆಯುತ್ತಾರೆ. ಇವು ಬೇಹದ್ದಿನ ಮಾತುಗಳಾಗಿವೆ. ಅವರು ಹದ್ದಿನ ಶಿಕ್ಷಕರಾಗಿದ್ದಾರೆ, ಇವರು ಬೇಹದ್ದಿನ ಶಿಕ್ಷಕರಾಗಿದ್ದಾರೆ ಅಂದಾಗ ಮಕ್ಕಳಲ್ಲಿ ಎಷ್ಟೊಂದು ಖುಷಿಯಿರಬೇಕು. ತಂದೆಯು ತಿಳಿಸುತ್ತಾರೆ - ಎಲ್ಲರ ಪಾತ್ರವೂ ಒಂದೇರೀತಿಯಿರಲು ಸಾಧ್ಯವಿಲ್ಲ, ಇವರದಂತೂ ಪಾತ್ರವಿತ್ತು ಆದರೆ ಅವರನ್ನು ಅನುಸರಿಸುವವರು ಕೋಟಿಯಲ್ಲಿ ಕೆಲವರೆ ಕೆಲವರು. ಬಾಬಾ, ನಾನು ಏಳುದಿನದ ಮಗುವಾಗಿದ್ದೇನೆ, ಒಂದುದಿನದ ಮಗುವಾಗಿದ್ದೇನೆ ಎಂದು ಹೇಳುತ್ತಾರೆ ಅಂದಾಗ ತಂದೆಯು ಪ್ರತಿಯೊಂದು ಮಾತನ್ನು ತಿಳಿಸುತ್ತಿರುತ್ತಾರೆ. ನದಿಯನ್ನೂ ಪಾರುಮಾಡಿ ಬಂದಿದ್ದಿರಿ, ತಂದೆಯು ಬಂದಾಗಿನಿಂದಲೇ ಜ್ಞಾನವು ಆರಂಭವಾಗಿದೆ, ಅವರದು ಎಷ್ಟೊಂದು ಮಹಿಮೆಯಿದೆ, ಗೀತೆಯ ಅಧ್ಯಾಯವಂತೂ ನೀವು ಜನ್ಮ-ಜನ್ಮಾಂತರದಿಂದ ಎಷ್ಟೊಂದು ಬಾರಿ ಓದಿದ್ದೀರಿ. ಎಷ್ಟೊಂದು ಅಂತರವಿದೆ! ಕೃಷ್ಣಭಗವಾನುವಾಚ ಎಲ್ಲಿ, ಶಿವ ಭಗವಾನುವಾಚ ಎಲ್ಲಿ! ರಾತ್ರಿ-ಹಗಲಿನ ಅಂತರವಿದೆ. ಈಗ ನಿಮ್ಮ ಬುದ್ಧಿಯಲ್ಲಿದೆ - ನಾವು ಸತ್ಯಖಂಡದಲ್ಲಿದ್ದೆವು. ಬಹಳ ಸುಖವನ್ನೂ ನೋಡಿದೆವು, ನೀವು ಮಕ್ಕಳು (ಮುಕ್ಕಾಲುಭಾಗ) ಸುಖವನ್ನೂ ನೋಡುತ್ತೀರಿ. ತಂದೆಯು ನಾಟಕವನ್ನು ಸುಖಕ್ಕಾಗಿ ಮಾಡಿದ್ದಾರೆಯೇ ಹೊರತು ದುಃಖಕ್ಕಾಗಿ ಅಲ್ಲ. ಈ ದುಃಖವಂತೂ ನಿಮಗೆ ಕೊನೆ-ಕೊನೆಯಲ್ಲಿ ಸಿಕ್ಕಿದೆ. ಯುದ್ಧವು ಅಷ್ಟು ಬೇಗನೆ ಆಗುವುದಿಲ್ಲ, ನಿಮಗೆ ಬಹಳಷ್ಟು ಸುಖ ಸಿಗುತ್ತದೆ. ಸುಖ-ದುಃಖವು ಸಮಪಾಲು ಇದ್ದರೂ ಸಹ ಅಷ್ಟೊಂದು ಮಜಾ ಇರುವುದಿಲ್ಲ. 3500 ವರ್ಷಗಳ ಕಾಲ ಯಾವುದೇ ಯುದ್ಧವಿರುವುದಿಲ್ಲ, ರೋಗವಿರುವುದಿಲ್ಲ. ಇಲ್ಲಂತೂ ನೋಡಿ, ಕಾಯಿಲೆಯೆಂದರೆ ಕಾಯಿಲೆಯು ಬರುತ್ತಿವೆ. ಸತ್ಯಯುಗದಲ್ಲಿ ಈ ದವಸ-ಧಾನ್ಯಗಳನ್ನು ತಿಂದುಬಿಡುವಂತಹ ಕೀಟಗಳು ಇರುವುದೇ ಇಲ್ಲ ಆದ್ದರಿಂದ ಅದರ ಹೆಸರೇ ಆಗಿದೆ - ಸ್ವರ್ಗ. ಆದ್ದರಿಂದ ವಿಶ್ವದ ನಕ್ಷೆಯನ್ನು ನೀವು ತೋರಿಸಬೇಕು ಆಗಲೇ ಅರಿತುಕೊಳ್ಳುತ್ತಾರೆ. ಭಾರತವು ಮೊಟ್ಟಮೊದಲಿಗೆ ಈ ರೀತಿಯಿತ್ತು. ಆಗ ಯಾವುದೇ ಧರ್ಮವಿರಲಿಲ್ಲ. ದ್ವಾಪರದಲ್ಲಿ ನಂಬರ್‌ವಾರ್ ಆಗಿ ಧರ್ಮಸ್ಥಾಪನೆ ಮಾಡುವವರು ಬರುತ್ತಾರೆ. ಈಗ ನೀವು ಮಕ್ಕಳಿಗೆ ವಿಶ್ವದ ಚರಿತ್ರೆ-ಭೂಗೋಳವು ತಿಳಿದಿದೆ. ನಿಮ್ಮನ್ನು ಬಿಟ್ಟು ಉಳಿದವರೆಲ್ಲರೂ ಸಹ ನೇತಿ-ನೇತಿ ನಾವು ತಂದೆಯನ್ನು ಅರಿತುಕೊಂಡಿಲ್ಲವೆಂದು ಹೇಳಿಬಿಡುತ್ತಾರೆ. ಅವರಿಗೆ ಯಾವುದೇ ನಾಮ, ರೂಪ, ದೇಶ, ಗೊತ್ತಿಲ್ಲವೆಂದು ಹೇಳಿಬಿಡುತ್ತಾರೆ. ನಾಮ, ರೂಪವಿಲ್ಲದಿದ್ದರೆ ಮತ್ತೆ ಯಾವುದೇ ದೇಶವಿರಲು ಸಾಧ್ಯವಿಲ್ಲ, ಮನುಷ್ಯರು ಏನನ್ನೂ ಅರಿತುಕೊಂಡಿಲ್ಲ. ಈಗ ತಂದೆಯು ಯಥಾರ್ಥ ಪರಿಚಯವನ್ನು ನೀವು ಮಕ್ಕಳಿಗೆ ಕೊಡುತ್ತಾರೆ. ಒಳ್ಳೆಯದು-

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತಾ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ, ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:-

1. ಸದಾ ಅಪಾರ ಖುಷಿಯಿರಲು ಬೇಹದ್ದಿನ ತಂದೆಯು ಯಾವ ಮಾತುಗಳನ್ನು ತಿಳಿಸುವರೋ ಅದರ ಸ್ಮರಣೆ ಮಾಡಬೇಕು ಮತ್ತು ತಂದೆಯನ್ನು ಅನುಸರಿಸುತ್ತಾ ನಡೆಯಬೇಕಾಗಿದೆ.

2. ಸದಾ ಆರೋಗ್ಯವಾಗಿರಲು 'ಪವಿತ್ರತೆ'ಯನ್ನು ತನ್ನದನ್ನಾಗಿ ಮಾಡಿಕೊಳ್ಳಬೇಕಾಗಿದೆ. ಪವಿತ್ರತೆಯ ಆಧಾರದಿಂದ ಆರೋಗ್ಯ, ಐಶ್ವರ್ಯ ಮತ್ತು ಸಂತೋಷದ ಆಸ್ತಿಯನ್ನು ತಂದೆಯಿಂದ ಪಡೆಯಬೇಕಾಗಿದೆ.

ವರದಾನ : ಸರ್ವಪ್ರಾಪ್ತಿಗಳನ್ನು ಸ್ಮೃತಿಯಲ್ಲಿ ಇಮರ್ಜ್ ಆಗಿಟ್ಟುಕೊಂಡು ಸದಾ ಸಂಪನ್ನರಾಗಿರುವಂತಹ ಸಂತುಷ್ಟ ಆತ್ಮಭವ

ಸಂಗಮಯುಗದಲ್ಲಿ ಬಾಪ್ದಾದಾರವರ ಮೂಲಕ ಏನೆಲ್ಲಾ ಪ್ರಾಪ್ತಿಗಳಾಗಿವೆ, ಅವುಗಳ ಸ್ಮೃತಿ ಇಮರ್ಜ್ ರೂಪದಲ್ಲಿ ಇರಬೇಕು. ಆದ್ದರಿಂದ ಪ್ರಾಪ್ತಿಗಳ ಖುಷಿ ಎಂದೂ ಹಲ್ಚಲ್ನಲ್ಲಿ ಕೆಳಗೆ ತರುವುದಿಲ್ಲ. ಸದಾ ಅಚಲರಾಗಿರುತ್ತಾರೆ. ಸಂಪನ್ನತೆ ಅಚಲರನ್ನಾಗಿ ಮಾಡುವುದು, ಹಲ್ಚಲ್ ನಿಂದ ಬಿಡಿಸುವುದು. ಯಾರು ಸರ್ವ ಪ್ರಾಪ್ತಿಗಳಿಂದ ಸಂಪನ್ನರಾಗಿದ್ದಾರೆ ಅವರು ಸದಾ ರಾಜಿ, ಸದಾ ಸಂತುಷ್ಟರಾಗಿರುತ್ತಾರೆ. ಸಂತುಷ್ಟತೆ ಎಲ್ಲಕ್ಕಿಂತ ದೊಡ್ಡ ಖಜಾನೆಯಾಗಿದೆ. ಯಾರ ಬಳಿ ಸಂತುಷ್ಟತೆಯಿದೆ ಅವರ ಬಳಿ ಎಲ್ಲವೂ ಇದೆ. ಅವರು ಇದೇ ಗೀತೆ ಹಾಡುತ್ತಿರುತ್ತಾರೆ ಏನು ಪಡೆಯ ಬೇಕಿತ್ತೊ ಅದನ್ನು ಪಡೆದೆನು.

ಸ್ಲೋಗನ್: ಪ್ರೀತಿಯ ಉಯ್ಯಾಲೆಯಲ್ಲಿ ಕುಳಿತು ಬಿಡಿ ಆಗ ಪರಿಶ್ರಮ ತಾನಾಗಿಯೇ ಬಿಟ್ಟು ಹೋಗುವುದು.